ಹಾಳು ಬುರಾ ಜಾನ್ವರ್ ಹೆಸರನ್ನ ಹೀಗೆ... ರಾಜಾ ರೋಷವಾಗಿ ಹೇಳ್ತಿದೀಯಾ ಅಂದ್ರೆ... ನಿಂಗೆ ಧರ್ಮ ಸಂಸ್ಕಾರ ಇಲ್ಲ ಅಂತ ಆಯಿತು... ಹೋಗು... ನೀನು ಇಲ್ಲಿಂದ ಹೊರಟು ಹೋಗು..." ಎಂದು ಹಿಗ್ಗಾಮುಗ್ಗಾ ಉಗಿದಳು.

ದಾವೂದ್ ಸಂಪೂರ್ಣ ಶರಣಾಗತನಾಗಿ ಬಿಟ್ಟಿದ್ದ. ಇನ್ನೇನೂ ಬಾಕಿ ಇರಲಿಲ್ಲ... ನೆಲದವರೆಗಲ್ಲ... ನೆಲದೊಳಗೆ ಗುಳಿ ತೆಗೆದು ಬಾಗಿಬಿಟ್ಟಿದ್ದ.

ಒಂದು ಮಾತನಾಡಿ ಇನ್ನಷ್ಟು ಅನರ್ಥಗಳಿಗೆ ಒಡ್ಡಿಕೊಳ್ಳುವುದು ಬೇಡವೆಂದು ಅವನು ದಾವು ನಡಿಗೆಯಲ್ಲಿ ಹೊರನಡೆದ. ಜೀನತ್, ಅವನಿಗೆ ಇನ್ನಷ್ಟು ಶಾಪ ಹಾಕುತ್ತಾ, ಹಾಕಿದ ಕೂಡಲೇ ತನ್ನ ವ್ರತಕ್ಕೆ ಧಕ್ಕೆಯಾಯಿತೆಂದು ಕೊರಗಿ, ಕ್ಷಮಾಪಣೆ ಕೋರುತ್ತಾ, ಹಸಿವು, ಆಯಾಸ, ಸಂಕಟ, ದುರ್ನಾತದಿಂದ ಕಂಗೆಟ್ಟು ಮುಂದೇನೂ ದಾರಿಕಾಣದೆ, ನಮಾಜಿನ ಚಾಪೆಯನ್ನು ಬಿಡಿಸುತ್ತಾ ಪ್ರಾರ್ಥನೆಗಣಿಯಾದಳು. ಅದೆಷ್ಟು ಹೊತ್ತು ಪ್ರಾರ್ಥಿಸಿದಳೋ... ಅದೇನು ತಿಂದಳೋ ಬಿಟ್ಟಳೋ ದುರ್ನಾತ ಮಾತ್ರ ವ್ಯಾಪಕವಾಗಿ ಆ ಮನೆಯಲ್ಲಿ ಪ್ರಸರಿಸತೊಡಗಿತು. ಅನೀಸ್, ಸಾದಿಕ್‌ರಿಗೂ ಆಕೆಯ ಗಂಡನಿಗೂ ಸೊಸೆಯಂದಿರಿಗೂ ಹೊಟ್ಟೆ ತೊಳೆಸಿ ವಾಕರಿಕೆಯೆನಿಸತೊಡಗಿತ್ತು. ಜೀನತ್‌ಳಿಗಂತೂ ಹುಚ್ಚೇ ಹಿಡಿದಂತೆ ಅನಿಸತೊಡಗಿತು.

ಹೀಗಾಗಿ ಮಲಗುವ ಮುನ್ನ ಆಕೆ ಇನ್ನೂ ನಾಲ್ಕೈದು ಬಾರಿ ದಾವೂದ್‌ಗೆ ಫೋನ್ ಮಾಡಿ ಗದರಿಸಿ, ಬೆದರಿಸಿ, ಉಗಿದು ಎಚ್ಚರಿಕೆಯನ್ನು ನೀಡಿದಳು. ಅಷ್ಟೇ ಅಲ್ಲದೆ ಬೆಳಗಿನ ಜಾವ ಮೂರುವರೆಗೆ ಆಕೆ ಕಣ್ಣುಬಿಟ್ಟಾಗಿನಿಂದ, ಬೆಳಗಿನ ನಮಾಜ್‌ನವರೆಗೂ ಹಲವು ಹತ್ತು ಬಾರಿ ಫೋನ್ ಮಾಡಿದ್ದಳು. ದಾವೂದ್‌ನ ರಾತ್ರಿಯ ನಿದ್ದೆಯನ್ನು ಕಸಿದಿದ್ದಳು.

ಅವನಿಗಂತೂ ತಾನು ಯಾಕಾದರೂ ಆ ಸೈಟಿಗೆ ಕೈಹಾಕಿದೆ ಎಂದು ಪಶ್ಚಾತ್ತಾಪವಾಗತೊಡಗಿತ್ತು. ಬೆಳಗಿನ ಜಾವದ ಸೆಹೆರಿ ಊಟವನ್ನು ಅವನು ಆತುರಾತುರವಾಗಿ ಮುಗಿಸಿ ಜೀನತ್‌ಳ ಮನೆಗೆ ಬಂದ. ಎಂದಿನಂತೆ ಅವಳ ಮನೆಯ ಗೋಡೆಯನ್ನು ಹಾರಿ ತನ್ನ ಸೈಟಿನತ್ತ ನೆಗೆದ. ಇನ್ನೂ ಕತ್ತಲು ಹರಿದಿರಲಿಲ್ಲ. ಮುಂಜಾವಿನ ಸೂರ್ಯ ಕಿರಣಗಳು ಮೂಡಿರಲಿಲ್ಲ. ಅವನ ದುಸ್ಸಾಹಸವನ್ನು ಕಂಡು ಜೀನತ್‌ಳಿಗೆ ಒಂದಿಷ್ಟು ಆತಂಕವೂ ಆಯಿತು. ಎಲ್ಲಾದರೂ ಕ್ರಿಮಿಕೀಟಗಳು, ಹಾವು ಮಂಡಳಗಳು ಅಲ್ಲಿ ಸೇರಿಕೊಂಡಿದ್ದಲ್ಲಿ ಎಂತಹ ಅನಾಹುತವಾಗಬಹುದೆಂದು ಅವಳ ಎದೆ ಡವಗುಟ್ಟಿತು. ಹಗಲು ರಾತ್ರಿ ಅವನಿಗೆ ಶಾಪ ಹಾಕುತ್ತಿದ್ದರೂ ಕೂಡಾ ಅವನು ಕತ್ತಲೆಯಲ್ಲಿ ಗೋಡೆ ಹಾರಿ ಆ ಕೊಂಪೆಗೆ ಕಾಲು ಇಟ್ಟ ದೃಶ್ಯ ಅವಳಲ್ಲಿ ಅಪಾರ ಆತಂಕವನ್ನು ಉಂಟು ಮಾಡಿತ್ತು. ಈ ಯಾವುದರ ಪರಿವೆಯೇ ಇಲ್ಲದೆ ಅವಳ ಗಂಡ ಮತ್ತು ಮಕ್ಕಳು ಹಾಗೂ ಸೊಸೆಯಂದಿರು ಸೆಹೆರಿ ಊಟದ ಕೊನೆಯ ಕಾರ್ಯಾಚರಣೆಯಲ್ಲಿ ಮಗ್ನರಾಗಿದ್ದರು. ಇನ್ನೇನು ಸೆಹೆರಿ ಊಟದ ಹೊತ್ತು ಕೊನೆಗೊಳ್ಳುವುದು. ಚಹದ ಗುಟುಕು ಗಂಟಲಿಂದ ಕೆಳಗೆ ಇಳಿಸಬೇಕು ಅಥವಾ ಸಿಂಕ್‌ನಲ್ಲಿ ಹೊರ ಚೆಲ್ಲಿ ಬಾಯಿ ಮುಕ್ಕಳಿಸಬೇಕು ಎಂಬ ಆತಂಕದಲ್ಲಿಯೇ ಅವಳ ಮಗ ಅನೀಸ್ ಬೇಗ ಬೇಗನೆ ಚಹಾ ಗುಟುಕರಿಸುತ್ತಿದ್ದ. ಅದೇ ಹೊತ್ತಿನಲ್ಲಿ ಗೋಡೆಯ ಮೇಲಿನಿಂದ ತನ್ನ ಸೈಟಿನತ್ತ ಹಾರಿ ಹೋದ ದಾವುದ್ ಯಾವುದೇ ಸುಳಿವು ಬಿಡದೆ ಮಾಯವಾಗಿದ್ದನ್ನು ಕಂಡು ಜೀನತ್ ಹೆದರಿಕೆಯಿಂದ ಕಂಗಾಲಾದಳು. ಕುಸಿದು ಬಿದ್ದ ಪಾಳು ಮನೆಯಿಂದ ಕೂಡಿದ ಆ ಮನೆಯ ಗುಡ್ಡೆ ಮತ್ತು ಹಿಂದೆ ಅಂಗಳವಾಗಿದ್ದ ಜಾಗದಲ್ಲಿ ಯರ್ರಾಬಿರ್ರಿ ಬೆಳೆದಿದ್ದ, ಕಾಲಿಡಲು ಜಾಗವಿಲ್ಲದಂತಹ ಕಾಡು, ಅನೇಕ ಪ್ರಾಣಿಗಳಿಗೆ ಆಶ್ರಯವನ್ನು ನೀಡಿದೆ ಎಂಬುದರಲ್ಲಿ ಅವಳಿಗೆ ಯಾವುದೇ ಶಂಕೆ ಇರಲಿಲ್ಲ. ಮತ್ತು ಅಲ್ಲಿ ಬರೀ ಹಾವು ಮಾತ್ರವಲ್ಲದೆ ನಾಗರ ಹಾವುಗಳೇ ಕುಟುಂಬ ಸಮೇತ ಬೇರು ಬಿಟ್ಟಿವೆ ಎಂತಲೂ ಅವಳಿಗೆ ಖಚಿತವಾಗಿತ್ತು. ಅಪರಾತ್ರಿಯಲ್ಲಿ ಯಾವುದೋ ಒಂದು ವಿಚಿತ್ರವಾದ, ಅವಳ